

**ಕೃಷ್ಣಮೂರ್ತಿ ಹನೂರು**

ಕಲೆ: ಮುರಳೀಧರ ರಾಠೋಡ್

# ಜಿತಸೇನ ಮಹಾರಾಜರ ಕತೆ

ಬಹುಕಾಲದ ಹಿಂದೆ ಉತ್ತರ ದಿಸೆಯ ವಿದಿಶಾ ನಗರದಲ್ಲಿ ಜಿತಸೇನ ಮಹಾರಾಜರೆಂಬುವರು ರಾಜ್ಯವಾಳುತ್ತಿದ್ದರು. ಅವರು ಪರಾಕ್ರಮಿಯೂ, ಧರ್ಮವಂತರೂ, ದೈವ ಭಕ್ತರೂ ಆಗಿದ್ದರು. ಅವರಿಗೊಬ್ಬ ಮಂತ್ರಿ ಅಜಿತಸೇನ. ಆ ಅಮಾತ್ಯರಾದರೋ ಮಿತಭಾಷಿಯೂ, ಕುಶಾಗ್ರಮತಿಯೂ, ಅಧೋನೇತ್ರ ನೋಟದಿಂದಲೇ ಸಕಲವನ್ನೂ ಅಳೆದುಬಿಡುವವರಾಗಿದ್ದರು. ಈ ಇರ್ವರೂ ದೈವಪರಾಯಣರೂ, ಧರ್ಮಭೀರುಗಳೂ ಆಗಿ ಲೋಕದಲ್ಲೆಲ್ಲ ಧರ್ಮ ಸಂಗತಿಗಳನ್ನು ಸಾರುತ್ತ ತತ್ಫಲವಾಗಿಯೇ ಪ್ರಜೆಗಳು ಸುಖ ಶಾಂತಿಯಿಂದಲೂ, ಸುಭಿಕ್ಷದಿಂದಲೂ ಇರುವರೆಂದು ತಿಳಿದಿದ್ದರು. ಇದಿಷ್ಟು ಮಾತ್ರವೇ ಅಲ್ಲದೆ ಜಿತಸೇನರು ತಾವು ಪಟ್ಟಾಭಿಷಿಕ್ತರಾದ ತರುವಾಯ ಅತ್ತ ವಾಯವ್ಯ ಭಾಗದಲ್ಲಿ ಮ್ಲೇಚ್ಛಖಂಡ, ಇತ್ತ ದಕ್ಷಿಣಾಪಥದ ಬಹುರಾಜ್ಯಗಳ ಮೇಲೂ ತಮ್ಮ ವಿಜಯವನ್ನು ಸಾಧಿಸಿದ್ದರು. ದಕ್ಷಿಣ, ಉತ್ತರಾಪಥದ ನಡುವಣ ಗುರ್ಜರ ಪ್ರಾಂತ್ಯದಲ್ಲಿಯೂ ಅವರ ವಿಜಯದುಂಧುಬಿ ಮೊಳಗುತ್ತಲಿದ್ದಿತು. ಅದಲ್ಲದೆ ಪವಿತ್ರ ಗಂಗಾನದಿಯಲ್ಲಿ ಅವರ ಸೈನ್ಯಬಲವು ಮಿಂದು ಎದ್ದಿದ್ದಿತು. ಈ ವಿಜಯೋತ್ಸವದ ನಡುವೆಯೇ ತಮ್ಮ ವಿಶಾಲ ಸಾಮ್ರಾಜ್ಯದಲ್ಲಿ ಆಗಾಗ ತಲೆದೋರುತ್ತಿದ್ದ ಅತಿವೃಷ್ಟಿ, ಅನಾವೃಷ್ಟಿ, ಕ್ಷಾಮಢಾಮರಗಳಲ್ಲದೆ, ಕಾಯಿಲೆ ಕಸಾಲೆ ಇದೆಲ್ಲವನ್ನೂ ನೀಗಿ, ಗ್ರಾಮನಗರಖೇಡಖರ್ವಡ ಸಮೂಹ ಶ್ರೇಯೋಭಿವೃದ್ಧಿಗೆ ಮನುಷ್ಯಶ್ರೇಷ್ಠರಾದ ತಾವು ಎಷ್ಟೇ ಪರಾಕ್ರಮಿಗಳಾಗಿದ್ದರೂ, ಅದೆಂಥ ಮಂತ್ರಿಮಂಡಲ ಮಹೋದಯರೇ ಇದ್ದರೂ ದೈವಕೃಪೆಯಿಲ್ಲದೆ ಈ ಚರಾಚರವು ಒಂದು ಗೋಪಾದದಷ್ಟೂ ಮುಂದೆ ಜರುಗದೆಂದು ವಿದಿಶಾ ನಗರದ ಹೊರವಲಯದಲ್ಲಿ ಭಾರಿ ದೇವಮಂದಿರವೊಂದರ ನಿರ್ಮಾಣ ಕೈಂಕರ್ಯವನ್ನು ಕೈಗೊಂಡಿದ್ದರು. ಹೀಗೆ ಮಂದಿರ ನಿರ್ಮಾಣ ತೊಡಗುವಲ್ಲಿ ಒಮ್ಮೆ ಮಹಾಪ್ರಭುಗಳು ಮಂತ್ರಿ ಅಜಿತಸೇನಾಮಾತ್ಯರಲ್ಲಿ ಪ್ರಶ್ನೆಯೊಂದನ್ನು ಮುಂದಿಟ್ಟು–